ಓ ಎಸ್ ನಂ.89/2018

ಡಿ .ಡಬ್ಲ್ಯೂ :4

ದಿನಾಂಕ : 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ವಾದಿಯು ನಮ್ಮ ಚಿಕ್ಕಪ್ಪ. ವಾದಿಯು ಯಾವ ಪರಿಹಾರಕ್ಕಾಗಿ ಈ ದಾವೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ . ಸ್ವತ್ತು ಬೇಕೆಂದು ಕೋರಿ ಈ ದಾವೆ ಸಲ್ಲಿಸಿದ್ದಾರೆ ಎಂದು ಸಾಕ್ಷಿ ಮುಂದುವರೆದು ಹೇಳಿದ್ದಾರೆ . ದಿಃ 21-08-2018 ರಂದು ವಾದಿಯು ನನಗೆ ತಿಳುವಳಿಕೆ ನೋಟಿಸ್ ಒಂದನ್ನು ನೀಡಿದ್ದರು ಎಂದರೆ ಸರಿಯಲ್ಲ . ದಿಃ 16-09-2018 ರಂದು ನಿಡಿ -2 ರಂತೆ ನಾನು ಸದರಿ ನೋಟಿಸ್ ಗೆ ಪ್ರತ್ಯುತ್ತರ ನೀಡಿದ್ದೇನೆ ಎಂದರೆ ಸರಿಯಲ್ಲ . ನಿಡಿ -2 ರಲ್ಲಿ ಕಂಡುಬರುವ ಹರೀಶ್ ಎಂದರೆ ನಾನೇ . ವಾದಿಯು ನಿಮಗೆ ಯಾವ ಕಾರಣಕ್ಕೆ ನೋಟಿಸ್ ನೀಡಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾವಾ ಸ್ವತ್ತನ್ನು ನನಗೆ ಬರೆದುಕೊಟ್ಟಿದ್ದೀರಿ ಎಂದು ವಾದಿಯು ಹೇಳುತ್ತಿದ್ದಾರೆ ಎಂದು ಉತ್ತರಿಸಿದ್ದಾರೆ . ನಿಪಿ-13 ರ ದಾಖಲೆಯಲ್ಲಿ ನನ್ನ ಸಹಿ ಇರುವುದಿಲ್ಲ . ದಿಃ 17-04-2017 ರಂದು ನಾನು ಮತ್ತು ಜಯಮ್ಮ ಅಲಿಯಾಜ್ ಜಯಲಕ್ಷ್ಮಮ್ಮ , ಕೆ ಟಿ ನಾರಾಯಣಪ್ಪ , ಕೆ ಟಿ ರಾಜಣ್ಣ ಮತ್ತು ಮಂಗಳಮ್ಮ ರವರು ಸೇರಿ ದಾವಾ ಸ್ವತ್ತಿಗೆ ಸಂಬಂಧಿಸಿ ವಾದಿಗೆ ನೋಂದಾಯಿತವಲ್ಲದ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ . ನಿಡಿ-1 ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ಸಹಿ ಮಾಡಿರುತ್ತೇನೆ ಎಂದು ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ . ನಿಡಿ-1 ಮತ್ತು ನಿಪಿ -13 ರಲ್ಲಿ ಕಂಡುಬರುವ ಹರೀಶ್ ಎಂಬ ಎರಡೂ ಸಹಿಗಳು ಒಂದೇ ರೀತಿಯಲ್ಲಿವೇ ಎಂದರೆ ಸಾಕ್ಷಿಯು ನಾನು ನಿಡಿ -1 ಕ್ಕೆ ಮಾತ್ರ ಸಹಿ ಮಾಡಿದ್ದೇನೆ ಎಂದು ಉತ್ತರಿಸಿದ್ದಾರೆ . ನಿಡಿ -1 ಮತ್ತು ನಿಪಿ -13 ರಲ್ಲಿ ಕಂಡುಬರುವ ಸಹಿಗಳು ಒಂದೇ ವ್ಯಕ್ತಿಯದ್ದೋ ಅಲ್ಲವೋ ಎಂಬುದರ ಬಗ್ಗೆ ತಿಳಿದುಕೊಳ್ಳಲು ಕೈಬರವಣಿಗೆ ತಜ್ಞರ ಬಗ್ಗೆ ದಾಖಲೆಗಳನ್ನು ಕಳುಹಿಸಲು ನನಗೆ ಯಾವುದೇ ಅಭ್ಯಂತರ ವಿಲ್ಲ .

ದಾವಾ ಸ್ವತ್ತು ಮೂಲತಃ ತಿಮ್ಮಶೆಟ್ಟಿ ರವರಿಗೆ ಸೇರಿದ್ದು . ಅವರಿಗೆ 14 ಜನ ಮಕ್ಕಳು . ಅವರುಗಳೆಂದರೆ ಕೆಟಿ ಚಂದ್ರಯ್ಯ , ಕೆ ಟಿ ಕೃಷ್ಣಪ್ಪ , ಕೆ ಟಿ ನಾರಾಯಣಪ್ಪ , ಕೆ ಟಿ ರಾಜಣ್ಣ , ಕೆ ಟಿ ಅಶ್ವತಶೆಟ್ಟಿ , ಕೆ ಟಿ ಶ್ರೀನಿವಾಸ, ಕೆ ಟಿ ವೆಂಕಟೇಶ್ , ಕೆ ಟಿ ಗೋವಿಂದ , ಜಯಲಕ್ಷ್ಮಮ್ಮ, ಲಕ್ಷ್ಮಮ್ಮ , ಶಾರದಮ್ಮ , ಸರೋಜಮ್ಮ ಮತ್ತೊಬ್ಬ ಮಗಳ ಹೆಸರು ಮರೆತ್ತಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ . ಅವರುಗಳಲ್ಲಿ ಪ್ರಸ್ತುತ ಶ್ರೀನಿವಾಸ , ಸರೋಜಮ್ಮ ಮತ್ತು ಶಾರದಮ್ಮ ರವರನ್ನು ಹೊರತುಪಡಿಸಿ ಉಳಿದವರು ಮರಣ ಹೊಂದಿದ್ದಾರೆ . 8 ನೇ ಪ್ರತಿವಾದಿಗೆ ತಿಮ್ಮಶೆಟ್ಟಿಯವರು ಎಂಟು ಜನ ಗಂಡು ಮಕ್ಕಳು ಸೇರಿ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಹೆಣ್ಣು ಮಕ್ಕಳು ಅದಕ್ಕೆ ಪಕ್ಷಗಾರರಲ್ಲ ಆದರೆ ಅವರಿಗೆ ಮಾಹಿತಿ ಇರುತ್ತದೆ . ದಾವಾ ಸ್ವತ್ತಿನಲ್ಲಿ ವಾದಿಗೂ ಸಹಾ ಹಕ್ಕು ಇದೆ ಎಂದರೆ ಸರಿ . 8 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಡುವಾಗ ವಾದಿಗೆ ವಿಚಾರ ತಿಳಿಸಿದ್ದೀರಾ ಎಂದರೆ ತಿಳಿಸಿದ್ದೇವೆ ಎಂದು ಸಾಕ್ಷಿ ಹೇಳಿದ್ದಾರೆ . ನಿಪಿ -13 ರ ಪ್ರಕಾರ ನಾವು ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದ ಕಾರಣ ನಿಡಿ -2 ರಂತೆ ಅವರು ನಮಗೆ ಕ್ರಯ ಪತ್ರ ನೋಂದಾಯಿಸಿಕೊಡಿ ಎಂದು ಕೋರಿ ನೋಟಿಸ್ ನೀಡಿದ್ದರು ಎಂದರೆ ಸಾಕ್ಷಿಯು ನನಗೆ ವ್ಯಯಕ್ತಿಕವಾಗಿ ಯಾವುದೇ ನೋಟಿಸ್ ಜಾರಿಯಾಗಿಲ್ಲ ನನ್ನ ದೊಡ್ಡಪ್ಪ ಚಿಕ್ಕಪ್ಪರವರಿಗೆ ಬಂದಿರಬಹುದು ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ನಿಡಿ-2 ಕ್ಕೆ ವಕೀಲರ ಮೂಲಕ ಪ್ರತ್ಯುತ್ತರ ಕೊಡಿಸಿದ್ದೀರಾ ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸಿದ್ದಾರೆ . ದಿಃ 02-03-2020 ರಂದು ಈ ದಾವೆಯಲ್ಲಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ ಎಂದರೆ ಸರಿ . ಸದರಿ ದಿನಾಂಕದಿಂದ ಇಂದಿನವರೆಗೂ ಈ ದಾವೆಯ ಬಗೆಗಿನ ಎಲ್ಲಾ ಮಾಹಿತಿ ತಿಳಿದುಕೊಂಡಿದ್ದೇನೆ ಎಂದರೆ ಸರಿ . ಈ ದಾವೆಯಲ್ಲಿ ವಾದಿಯ ವಿರುದ್ದ ನಾನು ದೊಡ್ಡಪ್ಪ ಮತ್ತು ದೊಡ್ಡಮ್ಮ ಎಲ್ಲರೂ ಪ್ರತಿರಕ್ಷಣಾ ಪತ್ರ ಸಲ್ಲಿಸಿದ್ದೇವೆ . 8 ನೇಪ್ರತಿವಾದಿ ಒಬ್ಬರೇ ಈ ದಾವೆ ನಡೆಸುತ್ತಿದ್ದರು , ದಾವೆಯಲ್ಲಿ ಏನು ತೀರ್ಮಾನವಾಗುತ್ತದೆ ಎಂದು ತಿಳಿದುಕೊಳ್ಳೋಣಾ ಎಂದು ನಾವು ಪ್ರತಿರಕ್ಷಣಾ ಪತ್ರ ಸಲ್ಲಿಸಿರಲಿಲ್ಲ , ಈಗ ಸಲ್ಲಿಸಿದ್ದೇವೆ ಎಂದರೆ ಸರಿ . ಮುಖ್ಯ ವಿಚಾರಣೆ ಪತ್ರದಲ್ಲಿ ತಿಮ್ಮಶೆಟ್ಟಿ ರವರಿಗೆ 14 ಜನ ಮಕ್ಕಳಿದ್ದಾರೆ ಎಂಬ ವಿಚಾರ ತಿಳಿಸಿಲ್ಲ ಎಂದರೆ ಸರಿ . ದಿಃ 01-08-2018

ರಂದು 8 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ ಕ್ರಯದ ಕರಾರು ಪತ್ರ ನೋಂದಾಯಿಸಿಕೊಟ್ಟಿದ್ದೇವೆ . ಕ್ರಯದ ಕರಾರು ಪತ್ರವನ್ನು ಯಾರು ಯಾರು ಬರೆದುಕೊಟ್ಟಿದ್ದೀರಾ ಎಂದರೆ ಜಯಲಕ್ಷ್ಮಮ್ಮ, ಕೆ ಟಿ ರಾಜಣ್ಣ , ಕೆ ಟಿ ರಾಜಶೇಖರ್, ನಾಗರಾಜು , ನಾನು , ಸುಶೀಲಮ್ಮ , ಅನಂತ್ ಕುಮಾರ್ ಮತ್ತು ಮಂಗಳಮ್ಮ ಸೇರಿ ಬರೆದುಕೊಟ್ಟಿದ್ದೇವೆ . 2,85,000/- ರೂಗಳಿಗೆ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದೆವು , 1,85,000/- ರೂಾಗಳನ್ನು ಮುಂಗಡ ಪಡೆದು ದಾಖಲೆ ಬರೆದುಕೊಟ್ಟಿದ್ದೇವೆ . 8 ನೇ ಪ್ರತಿವಾದಿಯಿಂದ ಇನ್ನೂ 1 ಲಕ್ಷ ಹಣ ಬರುವುದು ಬಾಕಿ ಇದೆ ಮತ್ತು 1,85,000/- ರೂಾಗಳನ್ನು ಮುಂಗಡ ಪಡೆದಿದ್ದೇವೆ ಎಂಬ ವಿಚಾರವನ್ನು ಪ್ರತಿರಕ್ಷಣಾ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ . ನಿಡಿ-1 ರ ನೋಂದಣಿ ಸಮಯ ಇಬ್ಬರು ಸಾಕ್ಷಿದಾರರು ಇದ್ದರು ಅವರ ಹೆಸರುಗಳು ನೆನಪಾಗುತ್ತಿಲ್ಲ . ಸಾಕ್ಷಿದಾರರುಗಳನ್ನು ನ್ಯಾಯಾಲಯಕ್ಕೆ ವಿಚಾರಣೆಗೆ ಕರೆಸಬಹುದೇ ಎಂದರೆ ಸಮಯವಕಾಶ ನೀಡಿದರೆ ಕರೆಸಬಹುದು ಎಂದು ತಿಳಿಸಿದ್ದಾರೆ . ಉಪನೋಂದಣಾಧಿಕಾರಿ ಕಚೇರಿಯ ಬಳಿ ನಿಡಿ -1 ನ್ನು ತಯಾರಿಸಲಾಗಿದೆ . ಪತ್ರ ಬರಹಗಾರರ ಹೆಸರು ಗೊತ್ತಿಲ್ಲ . ನಿಡಿ -1 ರಲ್ಲಿ ಪತ್ರ ಬರಹಗಾರರ ಸಹಿ ಗುರುತಿಸಬಹುದೇ ಎಂದರೆ ಇಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ನಾನು ಮತ್ತು ನನ್ನ ಅಣ್ಣ ನಾಗರಾಜು ನಿಡಿ -1 ನ್ನು ಬೆರಳಚ್ಚು ಮಾಡಿದ್ದೇವೆ ಎಂದರೆ ಸರಿಯಲ್ಲ . ಸಾಧಾರಣವಾಗಿ ಯಾವುದೇ ವ್ಯಕ್ತಿಯು ಕರಾರು ಪತ್ರ ಬರೆಸಿಕೊಂಡ ನಂತರ ಬರೆದುಕೊಟ್ಟವರು ಕ್ರಯದ ಕರಾರು ಪತ್ರ ನೋಂದಾಯಿಸಿಕೊಡದಿದ್ದಲ್ಲಿ ಪತ್ರ ನೋಂದಾಯಿಸಿಕೊಡುವಂತೆ ಕೋರಿ ನೋಟಿಸ್ ನೀಡುತ್ತಾರೆ ಎಂದರೆ ಸರಿ . ನಿಪಿ-13 ರ ಶರತ್ತುಗಳ ಪ್ರಕಾರ ವಾದಿಯು ಇಂದಿಗೂ ಸಹಾ ಬಾಕಿ ರೂ 6 ಲಕ್ಷ ಹಣ ನೀಡಲು ಮತ್ತು ಕ್ರಯ ಪತ್ರ ನೋಂದಾಯಿಸಿಕೊಳ್ಳಲು ಸಿದ್ದರಿದ್ದಾರೆ ಎಂದರೆ ಸಾಕ್ಷಿಯು ನಾವು ಅವರಿಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದು ತಿಳಿಸಿದ್ದಾರೆ . 8 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಕರಾರು ಪತ್ರ ಬರೆದುಕೊಡುವ ಸಮಯ ದಾವಾ ಸ್ವತ್ತಿನ ಪಹಣಿ ಯಾರ ಹೆಸರಿನಲ್ಲಿತ್ತು ಎಂದರೆ ತಿಮ್ಮಶೆಟ್ಟಿ ರವರ ಹೆಸರಿನಲ್ಲಿತ್ತು , ಜಯಲಕ್ಷ್ಮಮ್ಮ ರವರ ಹೆಸರಿಗೆ ಖಾತೆ ಬದಲಾಯಿಸಿಕೊಂಡು ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದು ಉತ್ತರಿಸಿದ್ದಾರೆ . ತಿಮ್ಮಶೆಟ್ಟಿ ರವರ

ಹೆಸರಿನಲ್ಲಿ ದಾವಾ ಸ್ವತ್ತಿನ ದಾಖಲೆ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ . ಜಯಲಕ್ಷ್ಮಮ್ಮ ರವರ ಹೆಸರಿಗೆ ಖಾತೆ ದಾಖಲಾಗುವ ಮೊದಲು ಕೆ ಟಿ ಚಂದ್ರಯ್ಯ ರವರ ಎರಡನೇ ಪತ್ನಿ ಮೀನಾಕ್ಷಮ್ಮ ರವರ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿ , ಆಕೆಯೂ ಸಹಾ ಮರಣ ಹೊಂದಿದ್ದಾರೆ ಎಂದು ಸಾಕ್ಷಿ ಹೇಳಿದ್ದಾರೆ . ಮೀನಾಕ್ಷಮ್ಮ ಮತ್ತು 1 ರಿಂದ 7 ನೇ ಪ್ರತಿವಾದಿಗಳಾದ ನಾವುಗಳು ಸೇರಿ ವಾದಿಯ ಹೆಸರಿಗೆ ನಿಪಿ -13 ದಾಖಲೆಯನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ . ಮೀನಾಕ್ಷಮ್ಮ ರವರ ಮರಣಾ ನಂತರ ಜಯಲಕ್ಷ್ಮಮ್ಮ ರವರ ಹೆಸರಿಗೆ ಖಾತೆ ಬದಲಾಯಿಸಿಕೊಂಡು ನಾವೆಲ್ಲರೂ ಸೇರಿ 8 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರವನ್ನು ನೋಂದಾಯಿಸಿಕೊಟ್ಟಿದ್ದೇವೆ ಎಂದರೆ ಸರಿ . ತಿಮ್ಮಶೆಟ್ಟಿ ರವರ 14 ಜನ ಮಕ್ಕಳಲ್ಲಿ 1 ರಿಂದ 7 ನೇ ಪ್ರತಿವಾದಿಗಳನ್ನು ಹೊರತುಪಡಿಸಿ ಉಳಿದವರು ಸಹಾ ಜೀವಂತವಿದ್ದರು , ಆದರೆ ಅವರೆಲ್ಲರ ಹೆಸರಿಗೆ ಜಂಟಿ ಖಾತೆ ಮಾಡಿಸಿಲ್ಲ ಎಂದರೆ ಸರಿ . ನಿಪಿ -13 ರಂತೆ ವಾದಿಗೆ ದಾವಾ ಸ್ವತ್ತಿನ ಸಂಬಂಧ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹಾ 8 ನೇ ಪ್ರತಿವಾದಿಯ ಹೆಸರಿಗೆ ನಿಡಿ -2 ನ್ನು ಬರೆದುಕೊಟ್ಟು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿಗೆ ಬರಬೇಕಾದ ಸ್ವತ್ತಿನ ಸಂಬಂಧ ಕರಾರು ಪತ್ರ ಬರೆದುಕೊಟಪ್ಪಿದ್ದರೂ ಸಹಾ 8 ನೇ ಪ್ರತಿವಾದಿಗೆ ಕರಾರು ಪತ್ರ ನೋಂದಾಯಿಸಿಕೊಟ್ಟು ಈಗ 8 ನೇ ಪ್ರತಿವಾದಿಯ ಪರವಾಗಿಯೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .